<u>ಸಾಕ್ಷಿಯನ್ನು ದಿನಾಂಕ 26-08-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ವಾದಿಯರ ಪರ ಶ್ರೀ ಬಿ.ಎಸ್. ವಕೀಲರಿಂದಃ</u>

ನನ್ನ ಅಜ್ಜನ ಹೆಸರು ಭೀಮಣ್ಣ. ನನ್ನ ಅಜ್ಜ ಭೀಮಣ್ಣನಿಗೆ ನನ್ನ ತಂದೆ ಮೃತ 1 ನೇ ಪ್ರತಿವಾದಿ ರಾಯಪ್ಪ, ಬಕ್ಕಪ್ಪ, ಮೊಗಲಮ್ಮ, ದೌಲಮ್ಮ ಮತ್ತು ಸಿದ್ದಮ್ಮ ಎಂಬ 5 ಜನ ಮಕ್ಕಳು. ಭೀಮಣ್ಣನ ಸದರಿ ಐದು ಜನ ಮಕ್ಕಳ ಪೈಕಿ ಸಿದ್ದಮ್ಮ ಒಬ್ಬಳೇ ಈಗ ಬದುಕಿದ್ದು ಉಳಿದವರು ಮೃತಪಟ್ಟಿರುತ್ತಾರೆ. ಸಿದ್ದಮ್ಮ ನಮ್ಮ ಊರಾದ ತಿರುಮಲಾಪೂರದಲ್ಲೆ ವಾಸವಿದ್ದಾಳೆ ಎಂದರೆ ಸರಿ. ನಿಮ್ಮ ಅಜ್ಜ ಭೀಮಣ್ಣನಿಗೆ ಯಾವ ಸರ್ವೆ ನಂಬರನಲ್ಲಿ ಎಷ್ಟು ಜಮೀನು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂಬರ 8 ರಲ್ಲಿ ಒಟ್ಟು 9 ಎಕರೆ 5 ಗುಂಟೆ ಜಮೀನು ಇತ್ತು ಹಾಗೂ ಇನ್ನೆರಡು ಸರ್ವೆ ನಂಬರಗಳಲ್ಲಿ 7 ಗುಂಟೆ ಮತ್ತು 11 ಗುಂಟೆ ಜಮೀನು ಇತ್ತು ಮತ್ತು ಸದರಿ ಜಮೀನುಗಳ ಸರ್ವೆ ನಂಬರಗಳು ನನಗೆ ನಿಖರವಾಗಿ ನೆನಪಿಲ್ಲ ಎನ್ನುತ್ತಾರೆ.

ನನ್ನ ಅಜ್ಜ ಭೀಮಣ್ಣನ ಮಕ್ಕಳು ನನ್ನ ಅಜ್ಜ ಬದುಕಿದ್ದಾಗಲೆ ಬೇರೆಯಾಗಿದ್ದರೋ ಅಥವಾ ನನ್ನ ಅಜ್ಜ ತೀರಿಕೊಂಡ ನಂತರ ಬೇರೆಯಾದರೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಅಂದರೆ ಮೃತ 1 ನೇ ಪ್ರತಿವಾದಿ ರಾಯಪ್ಪ ಮತ್ತು ಆತನ ಸಹೋದರ ಬಕ್ಕಪ್ಪ ಬೇರೆಯಾಗಿದ್ದಾರೆ. ನನ್ನ ತಂದೆ ಮತ್ತು ಬಕ್ಕಪ್ಪ ಯಾವ ಇಸವಿಯಲ್ಲಿ ಬೇರೆಯಾಗಿದ್ದಾರೆಂದು ನನಗೆ ಗೊತ್ತಿಲ್ಲ. ನಿಮ್ಮ ತಂದೆ ಮತ್ತು ಬಕ್ಕಪ್ಪ ಬೇರೆಯಾದಾಗ ಸದರಿಯವರಿಗೆ ಸರ್ವೆ ನಂಬರ 8 ಹಾಗೂ 23 ರಲ್ಲಿ ಎಷ್ಟೆಷ್ಟು ಎಕರೆ ಜಮೀನು ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ರಾಯಪ್ಪ ಸ.ನಂ.8 ರಲ್ಲಿ 4 ಎಕರೆ 23 ಗುಂಟೆ ಮಾತ್ರ ಜಮೀನು ಬಂದಿತ್ತು ಮತ್ತು ಅದೇ ಸರ್ವೆ ನಂಬರನಲ್ಲಿ ಬಕ್ಕಪ್ಪನಿಗೆ 4 ಎಕರೆ 22 ಗುಂಟೆ ಜಮೀನು ಬಂದಿತ್ತು ಹಾಗೂ ಸ.ನಂ.23 ರಲ್ಲಿ ನಮ್ಮ ತಂದೆ ಮತ್ತು ಬಕ್ಕಪ್ಪನಿಗೆ ಎಷ್ಟೇಷ್ಟು ಆಸ್ತಿ ಬಂದಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ.ನಂ.8 ರ ಉತ್ತರ ದಿಕ್ಕಿಗೆ ನನ್ನ ತಂದೆಗೆ ಬಂದಿದ್ದ 4 ಎಕರೆ 23 ಗುಂಟೆ ಜಮೀನು ಇದೆ ಮತ್ತು ಅದರ ದಕ್ಷಿಣ ದಿಕ್ಕಿಗೆ ಬಕ್ಕಪ್ಪನಿಗೆ ಬಂದ 4 ಎಕರೆ 22 ಗುಂಟೆ ಜಮೀನು ಇದೆ.

ನಿಮಗೆ ತಿಳಿದಿರುವಂತೆ ನಿಮ್ಮ ತಂದೆ ರಾಯಪ್ಪ ಸರ್ವೆ ನಂಬರ 23 ರ ಜಮೀನಿನಲ್ಲಿ ಯಾವಾಗಲಾದರೂ ಸ್ವಾಧೀನ ಇದ್ದರೆ ಎಂಬ ಪ್ರಶ್ನೆಗೆ ಸಾಕ್ಷಿ ಇದ್ದರು ಎನ್ನುತ್ತಾರೆ. ನಿಮ್ಮ ತಂದೆ ಸ.ನಂ. 23 ರಲ್ಲಿ ಸ್ವಾಧೀನ ಇದ್ದರು ಎಂದು ನೀವು ಹೇಳುತ್ತಿರುವ ಜಮೀನಿನ ವಿಸ್ತೀರ್ಣ ಎಷ್ಟಿತ್ತು ಎಂಬ

ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಮತ್ತು ಬಕ್ಕಪ್ಪ ಸದರಿ ಸರ್ವೆ ನಂಬರನಲ್ಲಿ ಇದ್ದ 11 ಗುಂಟೆ ಮತ್ತು 7 ಗುಂಟೆ ವಿಸ್ತೀರ್ಣದ ಎರಡು ಪ್ರತ್ಯೇಕ ಜಮೀನುಗಳಲ್ಲಿ ಸಮಭಾಗದ ಹಿಸ್ಸೆ ಹೊಂದಿ ಅದರ ಸ್ವಾಧೀನಲ್ಲಿದ್ದರು ಎನ್ನುತ್ತಾರೆ. 11 ಗುಂಟೆ ಜಮೀನಿನಲ್ಲಿ ನನ್ನ ತಂದೆ ಸ್ವಾಧೀನ ಇದ್ದ ಸಮ ಅರ್ಧಭಾಗದ ಜಮೀನು ಸ.ನಂ.23 ರ ಪಶ್ಚಿಮ ದಿಕ್ಕಿಗೆ ಇದೆ ಮತ್ತು ಬಕ್ಕಪ್ಪನಿಗೆ ಸೇರಿದ ಉಳಿದ ಅರ್ಧ ಭಾಗ ಸದರಿ ದಿಕ್ಕಿನ ಪೂರ್ವ ಭಾಗಕ್ಕೆ ಇದೆ. ಸಾಕ್ಷಿ ಪುನಹಃ ಸ್ವ-ಇಚ್ಛೆಯಿಂದ ಸ.ನ 23 ರಲ್ಲಿ ನನ್ನ ತಂದೆ ರಾಯಪ್ಪ ಮತ್ತು ಆತನ ಸಹೋದರ ಬಕ್ಕಪ್ಪನಿಗೆ ತಲಾ 11 ಗುಂಟೆ ಹಾಗೂ ತಲಾ 7 ಗುಂಟೆ ಜಮೀನು ಇತ್ತು ಎನ್ನುತ್ತಾರೆ. ಸ.ನಂ.23 ರ ಪಶ್ಚಿಮ ದಿಕ್ಕಿಗೆ ನನ್ನ ತಂದೆಗೆ ಸೇರಿದ 11 ಗುಂಟೆ ಜಮೀನು ಇತ್ತು ಮತ್ತು ಪೂರ್ವ ದಿಕ್ಕಿಗೆ ಬಕ್ಕಪ್ಪನಿಗೆ ಸೇರಿದ ಜಮೀನು ಇತ್ತು ಎಂದರೆ ಸರಿ. ಸ.ನಂ.23 ರ ಪೂರ್ವ ದಿಕ್ಕಿಗೆ ನನ್ನ ತಂದೆಗೆ 7 ಗುಂಟೆ ಜಮೀನು ಬಂದಿತ್ತು ಮತ್ತು ಸದರಿ ಸರ್ವೆ ನಂಬರನ ಪಶ್ಚಿಮ ದಿಕ್ಕಿಗೆ ಬಕ್ಕಪ್ಪನಿಗೆ ಬಂದಿದ್ದ 7 ಗುಂಟೆ ಜಮೀನು ಇದೆ.

ನನ್ನ ತಂದೆ ರಾಯಪ್ಪ ಮತ್ತು ಆತನ ಸಹೋದರ ಬಕ್ಕಪ್ಪನಿಗೆ ತಿರುಮಲಾಪೂರದಲ್ಲಿದ್ದ ಮತ್ತು ನನ್ನ ಅಜ್ಜ ಭೀಮಣ್ಣನಿಗೆ ಸೇರಿದ್ದ ತಲಾ ಒಂದೊಂದು ಮನೆ ಪಾಲು ವಿಭಾಗದಲ್ಲಿ ಬಂದಿತ್ತು ಎಂದರೆ ಸರಿ. ನನ್ನ ತಂದೆ ಪಾಲಿಗೆ ಬಂದಿದ್ದ ಮನೆ ಸಂಖ್ಯೆ 3-31 ಆಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಮನೆ ಸಂಖ್ಯೆ 3/31 ರ ಪಶ್ಚಿಮದ ಭಾಗವನ್ನು ಬಕ್ಕಪ್ಪನಿಗೆ ಕೊಡಲಾಗಿತ್ತು ಮತ್ತು ಅದರ ಪೂರ್ವದ ಭಾಗವನ್ನು ನನ್ನ ತಂದೆಗೆ ಕೊಡಲಾಗಿತ್ತು ಎಂದು ಸೂಚಿಸಿದರೆ ಸಾಕ್ಷಿ ಆ ಬಗ್ಗೆ ನನ್ನ ಅಣ್ಣನಿಗೆ ಗೊತ್ತು, ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನನ್ನ ತಂದೆಗೆ ಒಟ್ಟು 4 ಜನ ಗಂಡು ಮಕ್ಕಳು.

ಪಾಲು ವಿಭಾಗದಲ್ಲಿ ಬಕ್ಕಪ್ಪನಿಗೆ ಬಂದಿದ್ದ ಸ.ನಂ.8 ರಲ್ಲಿನ 4 ಎಕರೆ 23 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ಬಸವಂತನಾಯಕನ ಜಮೀನು, ಪಶ್ಚಿಮಕ್ಕೆ ನರಸಮ್ಮ ನಾಗರೆಡ್ಡಿ ಜಮೀನು, ಉತ್ತರಕ್ಕೆ ಶೇಖಪ್ಪ ಪಾಟೀಲ್ ರವರ ಜಮೀನು ಮತ್ತು ದಕ್ಷಿಣಕ್ಕೆ ಹಣುಮಂತ ತಂದೆ ಈರಪ್ಪರವರ ಜಮೀನು ಇದೆ ಎಂದರೆ ಸರಿ.

ಅದೇ ರೀತಿ ಪಾಲು ವಿಭಾಗದಲ್ಲಿ ಬಕ್ಕಪ್ಪನ ಪಾಲಿಗೆ ಸ.ನಂ.23 ರಲ್ಲಿ ಬಂದಿದ್ದ 11 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ಸಿಂಧೊಲ ಕುಟುಂಬದವರಿಗೆ ಸೇರಿದ ಜಮೀನು ಇದೆ ಎಂದರೆ ಸರಿ.

ಪಶ್ಚಿಮಕ್ಕೆ ದಶರಥ ನಾಯಕನ ಹೊಲ ಇದೆ ಎಂದು ಸೂಚಿಸಿದರೆ ಸಾಕ್ಷಿ ಪಶ್ಚಿಮಕ್ಕೆ ಯಾರ ಹೊಲ ಇದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಜಮೀನಿನ ಉತ್ತರ ದಿಕ್ಕಿಗೆ ಸಾಯಬಣ್ಣನ ಹೊಲ ಇದೆ ಎಂದು ಸೂಚಿಸಿದರೆ ಸಾಕ್ಷಿ ಸಾಯಬಣ್ಣ ಅಥವಾ ಶಿವಪ್ಪನ ಹೊಲ ಇರಬಹುದು ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಜಮೀನಿನ ದಕ್ಷಿಣ ದಿಕ್ಕಿಗೆ ಆನಂದರಾಯ ಗಂಗಯ್ಯನ ಜಮೀನು ಇದೆ ಎಂದು ಸೂಚಿಸಿದರೆ ಸಾಕ್ಷಿ ದಕ್ಷಿಣ್ಣ ದಿಕ್ಕಿಗೆ ಬಕ್ಕಪ್ಪ ತಂದೆ ಸಾಯಬಣ್ಣನ ಜಮೀನು ಇದೆ ಎನ್ನುತ್ತಾರೆ. ಸ.ನಂ.23 ರಲ್ಲಿ 1 ನೇ ವಾದಿ ಗಂಡ ಬಕ್ಕಪ್ಪನಿಗೆ ಬಂದ 11 ಗುಂಟೆ ಜಮೀನಿನ ದಕ್ಷಿಣ ದಿಕ್ಕಿಗೆ ಬಕ್ಕಪ್ಪ ತಂದೆ ಸಾಯಬಣ್ಣನ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಚಿಕ್ಕಪ್ಪ ಬಕ್ಕಪ್ಪನಿಗೆ ಸ.ನಂ.23 ರಲ್ಲಿ ಪಾಲು ವಿಭಾಗದ ಮೂಲಕ ಬಂದ 7 ಗುಂಟೆ ಜಮೀನಿನ ಪೂರ್ವ ದಿಕ್ಕಿಗೆ ಈಶಪ್ಪನ ಜಮೀನು ಇದೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಪೂರ್ವ ದಿಕ್ಕಿಗೆ ಕೇದರನಾಥನ ಜಮೀನು ಇದೆ ಎನ್ನುತ್ತಾರೆ. ಸದರಿ ಜಮೀನಿನ ಪಶ್ಚಿಮ ದಿಕ್ಕಿಗೆ ಧೂಳಪ್ಪನ ಹೊಲ ಇದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಶಿವ್ವಪ್ಪನ ಹೊಲ ಇದೆ ಎಂದು ಸೂಚಿಸಿದರೆ ಸಾಕ್ಷಿ ಬಕ್ಕಪ್ಪ ತಂದ ಸಾಯಬಣ್ಣನ ಹೊಲ ಇದೆ ಎನ್ನುತ್ತಾರೆ. ಸದರಿ ಜಮೀನಿನ ದಕ್ಷಿಣ ದಿಕ್ಕಿಗೆ ದೇವಮ್ಮನ ಹೊಲ ಇದೆ ಎಂದು ಸೂಚಿಸಿದರೆ ಸಾಕ್ಷಿ ಶಿವಪ್ಪನ ಹೊಲ ಇದೆ ಎನ್ನುತ್ತಾರೆ. ಸದರಿ 7 ಗುಂಟೆ ಜಮೀನಿನ ಪೂರ್ವಕ್ಕೆ ಕೇದರನಾಥನ ಜಮೀನು, ಉತ್ತರಕ್ಕೆ ಬಕ್ಕಪ್ಪ ತಂದೆ ಸಾಯಬಣ್ಣನ ಜಮೀನು ಮತ್ತು ಉತ್ತರಕ್ಕೆ ಶಿವಪ್ಪನ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಲು ವಿಭಾಗದಲ್ಲಿ ನನ್ನ ಚಿಕ್ಕಪ್ಪ ಬಕ್ಕಪ್ಪನ ಪಾಲಿಗೆ ಬಂದಿದ್ದ ಮನೆ ಸಂಖ್ಯೆ 3/31 ರ ಉತ್ತರ ದಿಕ್ಕಿಗೆ ನನ್ನ ತಂದೆ ಪಾಲಿಗೆ ಬಂದಿದ್ದ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಿದ್ದಮ್ಮಳ ಮನೆ ಮತ್ತು ದಕ್ಷಿಣಕ್ಕೆ ಮೊಗಲಮ್ಮನ ಮನೆ ಇದೆ ಎಂದರೆ ಸರಿ.

ಮೇಲ್ಕಂಡ ಚೆಕ್ಕು ಬಂದಿ ಹೊಂದಿರುವ ಎಲ್ಲಾ ದಾವಾ ಸ್ವತ್ತುಗಳು ನನ್ನ ಚಿಕ್ಕಪ್ಪ ಬಕ್ಕಪ್ಪನ ಪಾಲಿಗೆ ಪಾಲು ವಿಭಾಗದಲ್ಲಿ ಬಂದಿತ್ತು ಮತ್ತು ಪಾಲು ವಿಭಾಗ ಆದ ನಂತರ ಬಕ್ಕಪ್ಪ ತನ್ನ ಹೆಂಡತಿ ಹಾಗೂ ಮಗನಾದ ವಾದಿಯರ ಜೊತೆ ತುಮಕುಂಟಾ ಗ್ರಾಮಕ್ಕೆ ಬಂದು ವಾಸವಿದ್ದ ಹಾಗೂ ಎಲ್ಲಾ ದಾವಾ ಸ್ವತ್ತುಗಳ ಮಾಲೀಕ ಮತ್ತು ಕಬ್ಜೆದಾರ ಬಕ್ಕಪ್ಪನೆ ಆಗಿದ್ದ ಎಂದು ಸೂಚಿಸಿದರೆ ಸಾಕ್ಷಿ ಬಕ್ಕಪ್ಪ ಎಲ್ಲಾ ಆಸ್ತಿಗಳನ್ನು ಮಾರಿದ್ದಾನೆ ಎನ್ನುತ್ತಾರೆ. ಬಕ್ಕಪ್ಪ ತನ್ನ ಪಾಲಿಗೆ ಬಂದಿದ್ದ ಆಸ್ತಿಗಳನ್ನು ಯಾವಾಗ

ಮತ್ತು ಯಾರಿಗೆ ಮಾರಾಟ ಮಾಡಿದ್ದಾನೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಸುಮಾರು 25-30 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾನೆ, ಯಾರಿಗೆ ಮಾರಿದ್ದಾನೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎನ್ನುತ್ತಾರೆ. ಬಕ್ಕಪ್ಪ ಎಷ್ಟು ಹಣಕ್ಕೆ ಸದರಿ ಆಸ್ತಿಯನ್ನು ಮಾರಿದ್ದ ಎಂಬ ಪಶ್ನೆಗೆ ಸಾಕ್ಷಿ ಎಕರೆಗೆ 20 ರಿಂದ 25 ಸಾವಿರ ರೂ.ಗಳಿಗೆ ಮಾರಾಟ ಮಾಡಿರಬಹುದು ಎನ್ನುತ್ತಾರೆ.

ಬಕ್ಕಪ್ಪ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆ ಸಂಬಂಧ ವಾದಿಯರಿಗೆ ವಿಮಾ ಪರಿಹಾರದ ಹಣ ಸಿಕ್ಕಿದೆ ಎಂದು ಸೂಚಿಸಿದರೆ ಸಾಕ್ಷಿ ಮೊದಲು ಹೌದು ಎಂದು, ನಂತರ ಗೊತ್ತಿಲ್ಲ ಎನ್ನುತ್ತಾರೆ.

ನಿಡಿ-1 ರಿಂದ 11 ರಂತೆ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಕಂದಾಯ ಕಟ್ಟಿರುವ ರಸೀದಿ ದಾಖಲೆಗಳು ಪಾಲು ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ಸ.ನಂ.8 ರಲ್ಲಿ ಬಂದಿದ್ದ 4 ಎಕರೆ 22 ಗುಂಟೆ ಆಸ್ತಿಗೆ ಸಂಬಂಧಪಟ್ಟಿದೆ ಎಂದು ಸೂಚಿಸಿದರೆ ಸಾಕ್ಷಿ ನಾನು ಯಾವುದೇ ದಾಖಲೆ ಹಾಕಿಲ್ಲ ನೀವು ಹೇಳುತ್ತಿರುವುದು ಸುಳ್ಳು ಎನ್ನುತ್ತಾರೆ.

1 ನೇ ವಾದಿ ಈಗ್ಗೆ ಸುಮಾರು 25-30 ವರ್ಷಗಳಿಂದ ತುಮಕುಂಟಾ ಗ್ರಾಮದಲ್ಲಿ ವಾಸವಿದ್ದಾಳೆ. 1 ನೇ ವಾದಿ ತುಮಕುಂಟಾ ಗ್ರಾಮದಲ್ಲಿ ಕಳೆದ 30 ವರ್ಷಗಳಿಂದ ವಾಸವಿರುವುದರಿಂದ ನನ್ನ ತಂದೆ ಮತ್ತು ಅವರ ಮಕ್ಕಳಾದ ನನ್ನ ಹಾಗೂ ನನ್ನ ಸಹೋದರರ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಿಶಾನೆ ಪಿ-13 ರ ದಾಖಲೆಯಡಿ ನಡೆದಿರುವ ಪ್ರಕ್ರಿಯೆಗಳ ಬಗ್ಗೆ ವಾದಿಯರಿಗೆ ಏನೂ ಗೊತ್ತಿಲ್ಲ ಮತ್ತು ಸದರಿ ದಾಖಲೆಗೂ ವಾದಿಯರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಬಕ್ಕಪ್ಪನಿಗೆ ಪಾಲು ವಿಭಾಗದಲ್ಲಿ ಬಂದಿದ್ದ ಸ.ನಂ.8 ರಲ್ಲಿನ 4 ಎಕರೆ 23 ಗುಂಟೆ ಜಮೀನಿನ ಕಂದಾಯದ ದಾಖಲೆ ಯಾರ ಹೆಸರಿಗೆ ಯಾವ ಆಧಾರದಲ್ಲಿ ಬದಲಾವಣೆ ಆಯಿತು ಎಂಬ ಪ್ರಶ್ನೆಗೆ ಸಾಕ್ಷಿ ಬಕ್ಕಪ್ಪ ಸದರಿ ಜಮೀನನ್ನು ನನ್ನ ತಂದೆಗೆ ಮಾರಾಟ ಮಾಡಿದ್ದ, ಆ ಪ್ರಕಾರವೆ ಸದರಿ ಜಮೀನಿನ ಖಾತೆ ನನ್ನ ತಂದೆ ಹೆಸರಿಗೆ ಆಯಿತು ಎನ್ನುತ್ತಾರೆ. ನನ್ನ ತಂದೆ ಸದರಿ ಜಮೀನನ್ನು ಖರೀದಿ ಮಾಡಿರುವ ಬಗ್ಗೆಮತ್ತು ಆ ಪ್ರಕಾರ ಖಾತೆ ಬದಲಾವಣೆ ಆಗಿದೆ ಎಂಬುದನ್ನು ತೋರಿಸುವ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿ ಬದುಕಿದ್ದಾಗಲೂ ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಕ್ರಯದ ಆಧಾರದ ಮೇಲೆ ಸದರಿ ಜಮೀನಿನ ಖಾತೆ ನನ್ನ ತಂದೆ ಹೆಸರಿಗೆ ಬದಲಾವಣೆ

ಆಗಿದೆ ಎಂಬುದಾಗಿ ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ನಮೂದು ಇಲ್ಲ ಎನ್ನುವುದು ಸರಿಯಲ್ಲ. ಸ.ನಂ.8 ಮತ್ತು 23 ರಲ್ಲಿ ತನ್ನ ಪಾಲಿಗೆ ಬಂದಿದ್ದ ಆಸ್ತಿಗಳನ್ನು ಬಕ್ಕಪ್ಪ ನನ್ನ ತಂದೆಗೆ ಯಾವ ಇಸವಿಯಲ್ಲಿ ಮಾರಾಟ ಮಾಡಿದ್ದನು ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ಚಿಕ್ಕಪ್ಪ ಬಕ್ಕಪ್ಪ ಹೆಬ್ಬೆಟ್ಟಿನ ಗುರುತು ಹಚ್ಚುತ್ತಿದ್ದ ಎಂದರೆ ಸರಿ. ಪಾಲು ವಿಭಾಗದಲ್ಲಿ ಬಕ್ಕಪ್ಪನ ಪಾಲಿಗೆ ಬಂದಿದ್ದ ದಾವಾ ಸ್ವತ್ತಿನ ಮನೆಯ ಖಾತೆಯನ್ನು ಈಗ ನಾವು ನಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದು ಸೂಚಿಸಿದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮನೆಯ ಖಾತೆ ಈಗ ನನ್ನ ತಮ್ಮ ಈರಪ್ಪನ ಹೆಸರಿಗೆ ಇದೆ ಎನ್ನುವುದು ನನಗೆ ಗೊತ್ತಿಲ್ಲ. ಈರಪ್ಪನ ಹೆಸರಿಗೆ ಸದರಿ ಮನೆಯ ಖಾತೆ ಹೇಗೆ ಬದಲಾವಣೆ ಆಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಾದ ಸದರಿ ಮನೆಗೂ ನನಗೂ ಮತ್ತು ಇತರೆ ಪ್ರತಿವಾದಿಯರಿಗೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸಿದರೆ ಸಾಕ್ಷಿ ನನಗೂ ಸದರಿ ಮನೆಗೂ ಯಾವುದೇ ಸಂಬಂಧ ಇಲ್ಲ ಎನ್ನುತ್ತಾರೆ.

**<u>ಈ ಹಂತದಲ್ಲಿ ವಾದಿ ಪರ ವಕೀಲರು ಕಾಲವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**